# ವಿಜಯನಗರದ ಅಪ್ರಕಟಿತ ಶಾಸನ ಹಾಗೂ ನೊಳಂಬರ ತುರುಗೊಳ್ ಗೋಗ್ರಹಣ ವೀರಗಲ್ಲು

ವಿಜಯಕುಮಾರ ಎಸ್.
ಕನ್ನಡ ಉಪನ್ಯಾಸಕರು, ಶಾಸನ ಸಂಶೋಧಕರು, ಕುಂಬಳಹಳ್ಳಿ ಗ್ರಾಮ ಅಂಚೆ, ಹೊಸಕೋಟೆ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.

DOI: https://doi.org/10.5281/zenodo.17013755

## ABSTRACT:

ಚಿಕ್ಕಬಳ್ಳಾಪುರ ಜಿಲ್ಲೆಯ ಶಿಡ್ಲಘಟ್ಟ ತಾಲೂಕಿನ ಹಾರಡಿ ಗ್ರಾಮದಲ್ಲಿ ವಿಜಯನಗರ ಸಾಮ್ರಾಜ್ಯಾಧಿಪತಿಯಾದ ಶ್ರೀಕೃಷ್ಣದೇವರಾಯನ ಅಪ್ರಕಟಿತ ಶಾಸನ, ನೊಳಂಬ–ಗಂಗರ ಕಾಲಕ್ಕೆ ಸಂಬಂಧಿಸಿದ ತುರುಗೋಳ್ ವೀರಗಲ್ಲನ್ನು ಪತ್ತೆ ಹಚ್ಚಲಾಗಿದೆ. ಹಾರಡಿ ಎಂಬ ಗ್ರಾಮವು ಶಾಸನೋಕ್ತವಾಗಿ 'ಹಾಲಡಿ/ಹಲಡಿ' ಎಂದು ಉಲ್ಲೇಖಿಸಲ್ಪಟ್ಟಿದೆ. ಹಲ+ಇಡಿ ಅಥವಾ ಹಲ+ಅಡಿ ಎಂಬ ಪದಗಳಿಂದ ಹಾಲಡಿ ಅಥವಾ ಹಲಡಿ ಎಂಬ ಪದ ನಿಷ್ಪನ್ನವಾಗಿದೆ ಎಂದು ಊಹಿಸಬಹುದು. 'ಹಲ' ಎಂಬುದು ನಾಮಪದವಾಗಿರುವ ಸಾಧ್ಯತೆಗಳೂ ಇದೆ. ಹಾಗೆಯೇ ಹಲ ಎಂಬುದು ಕೃಷಿಯ ಉಪಕರಣವೂ ಹೌದು. ಈ ಹಿನ್ನೆಲೆಯಲ್ಲಿ ಈ ಪ್ರದೇಶದಲ್ಲಿ ಈ ಕೃಷಿ ಬಳಕೆಯ ಉಪಕರಣವನ್ನು ತಯಾರಿಸುತ್ತಿರಬಹುದು ಅಥವಾ 'ಹಲ'ನೆಂಬ ವ್ಯಕ್ತಿಯ ಅಡಿ(ಪಾದ)ಯಿಂದಾಗಿ ಈ ಗ್ರಾಮಕ್ಕೆ ಈ ಹೆಸರು ಬಂದಿರಲೂಬಹುದು ಎಂದು ಊಹಿಸಬಹುದಾಗಿದೆ.

ಶಾಸನವು ಮುಂಭಾಗ 10 ಸಾಲು ಹಿಂಭಾಗ 13 ಸಾಲು ಹೊಂದಿದೆ. ವಿಜಯನಗರದ ಕೃಷ್ಣರಾಯರ ಕಾಲಕ್ಕೆ ಸೇರಿದ್ದು "ನೆಲುವಾಗಿಲ ಸೀಮೆಯನ್ನು ನರಸನಾಯಕ ಅಯ್ಯನವರಿಗೆ ಗವುರೆನಾಯಕರು ಹಾಲಡಿಯ ಅಮರ ನಾಯಕತನವನು, ಸೀತಪ್ಪನ ಮಗ ಬಯಿರಪಗಳು ಬಸವಯ್ಯಗೆ ಗೊಡಗು ಮಾನ್ಯವಾಗಿ ವಿಶು ಸಂವತ್ಸರದಲ್ಲಿ" ದಾನ ನೀಡಿದ ಮಾಹಿತಿ ನೀಡುತ್ತದೆ. ಈ ಮಾನ್ಯಕ್ಕೆ ತಪ್ಪಿದವರು ವಾರಣಾಸಿಯಲ್ಲಿ ಹಸುವನ್ನು ಕೊಂದ ಪಾಪದಲ್ಲಿ ಹೋಗುವರು ಎಂಬ ಶಾಪಾಶಯವನ್ನು ಹೊಂದಿದೆ.

ನೊಳಂಬರ ಶಾಸನಗಳು ಅತಿಹೆಚ್ಚು ವೀರಗಲ್ಲುಗಳೇ ಇದ್ದು ಶಾಸನಗಳನ್ನು ಒಳಗೊಂಡ ಶಾಸನೋಕ್ತ ವೀರಗಲ್ಲುಗಳೇ ಆಗಿವೆ. ದೇವಾಲಯಗಳಿಗೆ ದಾನ ನೀಡಿದ ಶಾಸನಗಳನ್ನು ಸಹ ಗುರುತಿಸಬಹುದು. ಸುಮಾರು 1000 ವರ್ಷಗಳಿಗೂ ಮಿಗಿಲು ಕನ್ನಡ ನಾಡನ್ನು ಆಳಿದ ಕೀರ್ತಿ ಈ ವಂಶಕ್ಕೆ ಸಲ್ಲುತ್ತದೆ. ಸಾಮ್ರಾಟರಾಗಿ, ರಾಜರಾಗಿ, ಸಾಮಂತರಾಗಿ, ಮಾಂಡಲೀಕರಾಗಿ, ಸ್ವತಂತ್ರ ಪಾಳೇಗಾರರಾಗಿ ಕನ್ನಡ ನಾಡಿನಾದ್ಯಂತ ತಮ್ಮ ಚಹರೆಗಳನ್ನು ಉಳಿಸಿದ್ದಾರೆ. ಮೂಲ ಶೈವರಾದರೂ ಎಲ್ಲಾ ಧರ್ಮಗಳ ಸಮನ್ವಯಕಾರರಾಗಿರುವುದು ಕಾಣಬಹುದು. ಇವರ ರಾಜ ಲಾಂಛನ ನಂದಿ ಎನಿಸಿದರೂ ಇವರ ಎಲ್ಲಾ ವೀರಗಲ್ಲುಗಳಲ್ಲಿ 'ಕುಂಭ ಮತ್ತು ಕಂಭ'ವನ್ನು ಕಾಣಬಹುದಾಗಿದೆ.

**KEYWORDS:**

ನೊಳಂಬ-ಗಂಗ, ವೀರಗಲ್ಲು, ವಿಜಯನಗರ, ಕೃಷ್ಣದೇವರಾಯ, ಶಾಸನ.

ಚಿಕ್ಕಬಳ್ಳಾಪುರ ಜಿಲ್ಲೆಯ ಶಿಡ್ಲಘಟ್ಟ ತಾಲೂಕಿನ ಹಾರಡಿ ಗ್ರಾಮದಲ್ಲಿ ವಿಜಯನಗರ ಸಾಮ್ರಾಜ್ಯಾಧಿಪತಿಯಾದ ಶ್ರೀಕೃಷ್ಣದೇವರಾಯನ ಅಪ್ರಕಟಿತ ಶಾಸನ ಹಾಗೂ ನೊಳಂಬ-ಗಂಗರ ಕಾಲಕ್ಕೆ ಸಂಬಂಧಿಸಿದ ತುರುಗೋಳ್ ಗೋಗ್ರಹಣ ವೀರಗಲ್ಲನ್ನು ಪತ್ತೆಹಚ್ಚಲಾಗಿದೆ. ಹಾರಡಿ ಎಂಬ ಗ್ರಾಮವು ಶಾಸನೋಕ್ತವಾಗಿ 'ಹಾಲಡಿ/ ಹಲಡಿ' ಎಂದು ಉಲ್ಲೇಖಿಸಲ್ಪಟ್ಟಿದೆ. ಹಲ+ಇಡಿ ಅಥವಾ ಹಲ+ಅಡಿ ಎಂಬ ಪದಗಳಿಂದ ಹಾಲಡಿ ಅಥವಾ ಹಲಡಿ ಎಂಬ ಪದ ನಿಷ್ಪನ್ನವಾಗಿದೆ ಎಂದು ಊಹಿಸಬಹುದು. 'ಹಲ' ಎಂಬುದು ನಾಮಪದವಾಗಿರುವ ಸಾಧ್ಯತೆಗಳೂ ಇದೆ. ಹಾಗೆಯೇ ಹಲ ಎಂಬುದು ಕೃಷಿಯ ಉಪಕರಣವೂ ಹೌದು. ಈ ಹಿನ್ನೆಲೆಯಲ್ಲಿ ಈ ಪ್ರದೇಶದಲ್ಲಿ ಕೃಷಿ ಬಳಕೆಯ ಉಪಕರಣವನ್ನು ತಯಾರಿಸುತ್ತಿರಬಹುದು ಅಥವಾ 'ಹಲ'ನೆಂಬ ವ್ಯಕ್ತಿಯ ಅಡಿ(ಪಾದ)ಯಿಂದಾಗಿ ಈ ಗ್ರಾಮಕ್ಕೆ ಈ ಹೆಸರು ಬಂದಿರಲೂಬಹುದು ಎಂದು ಊಹಿಸಬಹುದಾಗಿದೆ. ಶಾಸನೋಕ್ತವಾದ ಹಾಲಡಿ ಅಥವಾ ಹಲಡಿಯೇ ಮುಂದೆ ಜನರ ಆಡು ಮಾತಿನ ಸೌಲಭ್ಯಾಕಾಂಕ್ಷೆಯಿಂದ ಅಥವಾ ಅಕ್ಷರ ಬದಲಾವಣೆಯ ರೂಪದಿಂದಾಗಿ ಹಾರಡಿ ಎಂಬ ನಿಷ್ಪನ್ನ ಉಳಿದಿದೆ.

**ನರಸಿಂಹ ದೇವಸ್ಥಾನದಲ್ಲಿ ವಿಜಯನಗರದ ಶಾಸನ:**

ಗ್ರಾಮದ ಮಧ್ಯ ಭಾಗದಲ್ಲಿ ಶ್ರೀಲಕ್ಷ್ಮೀ ನರಸಿಂಹ ದೇವಾಲಯವಿದ್ದು ದೇವಾಲಯದ ಒಳ ಪ್ರಾಂಗಣದಲ್ಲಿ ಶಾಸನವನ್ನು ಇಡಲಾಗಿದೆ. ಮೂಲ(ಪ್ರಾಚೀನ) ದೇವಾಲಯ ಈಗ ಇಲ್ಲವಾಗಿದ್ದು ಹೊಸದಾಗಿ ನಿರ್ಮಾಣ ಮಾಡಲಾಗಿದೆ. ಹಾರಡಿ ಗ್ರಾಮವು ನೊಳಂಬರ ಕಾಲಕ್ಕೆ ಇರುವ ಸಾಧ್ಯತೆಯಿದ್ದು ಹದಿನಾಲ್ಕು ಹದಿನೈದನೆಯ ಶತಮಾನದಲ್ಲಿ ಶಾಸನೋಕ್ತವಾಗಿ ಹಾಲಡಿ ಎಂದು ಉಲ್ಲೇಖಗೊಂಡಿದ್ದು ಜನರ ಮಾತಿನಿಂದ ಹೇಗೆ ಹಾರಡಿ ಆಗಿದೆ ಎಂಬುದನ್ನು ಈಗಾಗಲೇ ಚರ್ಚಿಸಲಾಗಿದೆ. ಲಕ್ಷ್ಮೀ ನರಸಿಂಹ ದೇವಾಲಯದಲ್ಲಿರುವ ವಿಜಯನಗರಕ್ಕೆ ಸಂಬಂಧಿಸಿದ ಶಾಸನದ ಕಲ್ಲಿನ ಎರಡೂ ಬದಿ ಶಾಸನ ಕೆತ್ತಲಾಗಿದೆ. ಇದು ಅಪ್ರಕಟಿತ ಶಾಸನವಾಗಿದ್ದು ಶಾಸನವು ವಿಜಯನಗರದ ಶ್ರೀಕೃಷ್ಣದೇವರಾಯರ [1509-1529] ಕಾಲಕ್ಕೆ ಸೇರಿದ್ದಾಗಿದೆ. ಶಾಸನವು "ವಿಶು ಸಂವತ್ಸರದ ಚಯಿತ್ರ ಸುದ್ಧ ಪಾಡ್ಯ 1 ಲು ಕ್ರಿ.ಶ.1521ರ ಮಾರ್ಚ್ 9ರ ಶನಿವಾರಕ್ಕೆ ಸರಿಹೊಂದುವ ಕಾಲದಲ್ಲಿ ನೆಲುವಾಗಿಲ ಸೀಮೆಯನ್ನು ನರಸನಾಯಕ ಅಯ್ಯನವರಿಗೆ ಕಟು ಗೊಡಗು ಮಾನ್ಯವಾಗಿ ಕೊಟ್ಟ ಸಂದರ್ಭದಲ್ಲಿ

ಗವುರೆನಾಯಕರು ಹಾಲಡಿ ಗ್ರಾಮದ ಅಮರನಾಯಕತ್ವವನ್ನು ನಿರ್ವಹಿಸಬೇಕಾದರೆ ಈ ಪ್ರಾಂತ್ಯದ ಸೀತಪ್ಪಗೌಡರ ಮಗ ಬಯಿರಪ್ಪಗೌಡರು ಬಸವಯ್ಯ ಎಂಬುವವರಿಗೆ 15 ಕೊಳಗ ಗದ್ದೆ ಭೂಮಿಯನ್ನು" ದಾನ ನೀಡಿದ ಮಾಹಿತಿ ನೀಡುತ್ತದೆ.

ಶಾಸನವನ್ನು ಎರಡೂ ಬದಿಯಲ್ಲಿ ಕೆತ್ತಿಸಿದ್ದು, ಒಟ್ಟು 24 ಸಾಲುಗಳನ್ನು ಹೊಂದಿದೆ. ಮುಂಭಾಗ ಹತ್ತು ಸಾಲಿನಿಂದ ಕೂಡಿದ್ದು ಹಿಂಭಾಗ ಹದಿನಾಲ್ಕು ಸಾಲುಗಳನ್ನು ಹೊಂದಿದೆ. ಈ ಶಾಸನದಲ್ಲಿನ ಅಕ್ಷರಗಳನ್ನು ಗಮನಿಸಿದಾಗ ಕೇವಲ 150 ರಿಂದ 200 ವರ್ಷಗಳ ಹಿಂದೆ ಕೆತ್ತಿಸಲಾಗಿದೆ ಎಂದು ಊಹಿಸಬಹುದಾಗಿದ್ದು ಬಹುಶಃ ಕೃಷ್ಣದೇವರಾಯನ ಕಾಲದ ಶಾಸನವು ನಾಶವಾಗಿದ್ದು ಆ ಶಾಸನವನ್ನೇ ನಕಲು ಮಾಡಿ ಹಾಕಿರುವ ಸಾಧ್ಯತೆಗಳು ಇದೆ ಎಂಬುದು ನನ್ನ ಅಭಿಪ್ರಾಯವಾಗಿದೆ. ಇದರ ಬಗ್ಗೆ ಶಾಸನ ಕಲ್ಲಿನ ಅಧ್ಯಯನದ ಅಗತ್ಯತೆ ಇದೆ.

**ಶಾಸನ ಪಾಠ ಮುಂಭಾಗ:**

1. ವಿಶು ಸಂವತ್ಸರದ
2. ಚೈತ್ರ ಸುದ ಪಾಡ್ಯ
3. 1 ಲು ಶ್ರೀಮತು ಕ್ರಿ
4. ಷ್ಣರಾಯ ಮಹಾರಾಯ
5. ರ ಕಾಲದಲ್ಲಿ ನೆಲುವಾಗಿಲ
6. ಸೀಮೆಯನ್ನು ನರಸಣ
7. ನಾಯಕ ಅಯ್ಯನವ
8. ರಿಗೆ ಕೊಟ್ಟ ದಿನದ
9. ಲ್ಲಿ ಗವುರೆನಾಯಕ
10. ಕರು ಹಾಲಡಿ

**ಹಿಂಭಾಗ**

11. ಯ ಅಮರಕೆ ಆಳು
12. ವ ದಿನದಲ್ಲಿ ಸೀತಪ್ಪ ಗ
13. ಉಡನ ಮಗ ಬಯಿರ
14. ಪ ಗಉಡರು (ಉಡಿ) .
15. ಯ ಬಸವಯಗಿ ಕೊಟ್ಟ
16. ಕಟು ಗೊಡಗೆ ಮಾನ್ಯ
17. ದ ಗದೆ ಪುದುಟು ಹ
18. ದಿನಯಿದು ಕೊಳಗ

19. ಗದೆ। ಯಿ ಮಾನ್ಯಕೆ
20. ಅರು ತಪಿದರು ವ
21. ಣರಾಸಿಯಲಿ ಕಪೀಲೆ
22. ನ್ನು ಕೊಂದ ಪಾಪಕೆ ಹೋ
23. ಹರು.

ಶಾಸನವನ್ನು ಕಲ್ಲು ಹೇಗಿದೆಯೋ ಹಾಗೆ ಅಕ್ಷರ ಸಾಲುಗಳನ್ನು ಕೆತ್ತಲಾಗಿದೆ. ಶಾಸನ ಕಲ್ಲು ಅಷ್ಟಾಗಿ ನುಣುಪಾಗಿಲ್ಲದಿದ್ದರೂ ಮುಂಭಾಗ ಮಾತ್ರ ಕಲ್ಲನ್ನು ಸಮತಟ್ಟಾಗಿ ಮಾಡಿಕೊಂಡಂತೆ ಕಾಣಿಸುತ್ತದೆ ಹಿಂಭಾಗ ಕಲ್ಲಿನ್ನು ಮೃದುಮಾಡಿಕೊಳ್ಳದೆ ಯಥಾವತ್ ಹಾಗೆಯೇ ಕೆತ್ತಲಾಗಿದೆ. ಸಾಮಾನ್ಯವಾಗಿ ವಿಜಯನಗರ ಕಾಲದ ಶಾಸನಗಳು ಎಲ್ಲವೂ ಒಂದೇ ರೀತಿಯಾಗಿದ್ದರೂ ಕಲ್ಲನ್ನು ಆಯ್ಕೆ ಮಾಡಿಕೊಳ್ಳುವಾಗ ಅಥವಾ ಶಾಸನವನ್ನು ರಚಿಸುವಾಗ ಚೌಕಾಕಾರವಿರುವಂತೆ ನೋಡಿಕೊಂಡಿರುವುದನ್ನು ಗಮನಿಸಬಹುದು. ಆದರೆ ಇಲ್ಲಿ ಶಾಸನ ಕೆತ್ತನೆಗೆ ಬಳಸಿರುವ ಕಲ್ಲು ತ್ರಿಭುಜಾಕೃತಿಯ ಆಯುಧದಂತೆ ಇದೆ. ಅಕ್ಷರಗಳು ಒಂದೇ ಸಮನಿಲ್ಲದಿದ್ದರೂ ಸಾಲುಗಳನ್ನು ಮಾಡುವಾಗ ಅದಕ್ಕೆ ತಕ್ಕಂತೆ ಅಕ್ಷರಗಳನ್ನು ರೂಪಿಸಿಕೊಂಡಿರುವುದನ್ನು ಕಾಣಬಹುದು.

**ನೆಲವಾಗಿಲ ಸೀಮೆ:** ಹಾರಡಿ ಗ್ರಾಮದಿಂದ ಸುಮಾರು 03 ಮೈಲಿ ದೂರವಿರುವ ಇದು ಪ್ರಸ್ತುತ ಹೊಸಕೋಟೆ ತಾಲ್ಲೂಕಿನಲ್ಲಿ ಬರುವ ಗ್ರಾಮಪಂಚಾಯತಿಯನ್ನು ಹೊಂದಿರುವ ಕೇಂದ್ರಸ್ಥಾನ. ಈ ಗ್ರಾಮವು ಸುಮಾರು ಎಂಟು ಒಂಬತ್ತನೇ ಶತಮಾನಕ್ಕಾಗಲೇ ಒಂದು ಆಡಳಿತ ಕೇಂದ್ರವಾಗಿದ್ದ ಮಾಹಿತಿ ಇಲ್ಲಿ ದೊರೆತಿರುವ ಶಾಸನಗಳಿಂದ ತಿಳಿದು ಬರುತ್ತದೆ. ಇಲ್ಲಿ ವಿಜಯನಗರಕ್ಕೆ ಸಂಬಂಧಿಸಿದ ಶಾಸನಗಳು ಲಭ್ಯವಿಲ್ಲದಿದ್ದರೂ ವೀರಗಲ್ಲುಗಳು ನಮಗೆ ಸಿಗುತ್ತವೆ. ಒಂದು ಸೀಮಾ ಪ್ರದೇಶವಾದ ನೆಲವಾಗಿಲು ಪ್ರದೇಶದಲ್ಲಿ ಹಲವು ವೀರಗಲ್ಲುಗಳು ಸಿಗುತ್ತವಾದರೂ ವಿಶೇಷ ಎನಿಸುವಂತಹ ವೀರಗಲ್ಲುಗಳು ಕೆಲವು ಮಾತ್ರ. ಅವುಗಳಲ್ಲಿಯೂ ಲಕ್ಕಮ್ಮ ಗೌಂಡಿಯ ಉಲ್ಲೇಖವಿರುವ ಶಾಸನೋಕ್ತ ವೀರಗಲ್ಲುಗಳು ಅಲಭ್ಯವಾಗಿದೆ. ಅವುಗಳಲ್ಲಿ ಕೆಲವು ಹಂದಿಬೇಟೆ ವೀರಗಲ್ಲು, ತುರುಗೋಳ್ ವೀರಗಲ್ಲು ಬಿಟ್ಟರೆ ಮತ್ಯಾವುದೇ ವಿಶೇಷ ಶಾಸನಗಳು ಸಿಗುವುದಿಲ್ಲ.

**ತುರುಗೋಳ್/ಶಾಸನೋಕ್ತ ತುರುಗೋಳ್(ಗೋಗ್ರಹಣ):** ವೀರಗಲ್ಲುಗಳಲ್ಲಿ ಯುದ್ಧವೀರಗಲ್ಲು, ಬೇಟೆ ವೀರಗಲ್ಲು, ಊರಳಿವು ವೀರಗಲ್ಲು ಎಂದು ಬೇರೆ ಬೇರೆ ವೀರಗಲ್ಲುಗಳನ್ನು ಗುರುತಿಸಬಹುದು.

» ಯುದ್ಧದಲ್ಲಿ ಹೋರಾಡಿ ಗೆದ್ದರೆ, ಪ್ರಾಣ ಕಳೆದುಕೊಂಡರೆ ವೀರನ ನೆನಪಿಗಾಗಿ ನೆಡಿಸುವ ಕಲ್ಲುಗಳು ಯುದ್ಧ ವೀರಗಲ್ಲು ಎನಿಸಿಕೊಳ್ಳುತ್ತವೆ.

» ಬೇಟೆ ವೀರಗಲ್ಲು ಎಂಬುದು ಹಂದಿಗಳನ್ನು ನಿಯಂತ್ರಿಸಲು, ಹುಲಿಗಳ ಉಪಟಳ ಕಡಿಮೆ ಮಾಡಲು ಆ ಪ್ರಾಣಿಗಳ ವಿರುದ್ಧ ಹೋರಾಡಿ ಮಡಿದ ವೀರರಿಗಾಗಿ ನೆಟ್ಟ ವೀರಗಲ್ಲುಗಳು ಬೇಟೆ ವೀರಗಲ್ಲು ಎನಿಸಿಕೊಳ್ಳುತ್ತವೆ.

» ಗ್ರಾಮದ ಮೇಲೆ ಯಾರಾದರೂ ಕಳ್ಳರು, ಪಕ್ಕದ ಪಾಳೆಪಟ್ಟುಗಳ, ನಾಡುಗಳ ಮುಖ್ಯಸ್ಥರಾದಿಯಾಗಿ ಹಸು ಎಂಬ ಸಂಪತ್ತನ್ನು ಒಯ್ಯಲು, ಮಹಿಳೆಯರನ್ನು ಬಲಾತ್ಕಾರ ಮಾಡಿ ಒಯ್ಯಲು, ಗ್ರಾಮಗಳನ್ನು ದೋಚಲು ಯಾರಾದರೂ ದಾಳಿ ಮಾಡಿದಾಗ ತೊಂದರೆಗೆ ಸಿಕ್ಕ ಗ್ರಾಮದ ಮುಖ್ಯಸ್ಥನೋ, ಗ್ರಾಮದ ವ್ಯಕ್ತಿಯೋ ಅವರ ವಿರುದ್ಧ ಹೋರಾಡಿ ಮಡಿದಾಗ ಅವರ ಸ್ಮರಣಾರ್ಥವಾಗಿ ನೆಟ್ಟ ಕಲ್ಲುಗಳೇ ಊರಳಿವು, ತುರುಗೋಳ್(ಗೋಗ್ರಹಣ) ವೀರಗಲ್ಲುಗಳೆನಿಸಿಕೊಳ್ಳುತ್ತವೆ. ಇವುಗಳಲ್ಲಿ ಸುಮಾರು 10–12ನೇ ಶತಮಾನದವರೆಗೂ ಶಾಸನೋಕ್ತವಾಗಿದ್ದರೆ ನಂತರದಲ್ಲಿ ಕೆಲವು ಮಾತ್ರ ಶಾಸನೋಕ್ತವಾಗಿದ್ದರೆ ಹಲವು ಶಾಸನ ರಹಿತ ವೀರಗಲ್ಲುಗಳೇ ಸಿಗುತ್ತವೆ.

**ನೊಳಂಬರ ಶಾಸನ ವೀರಗಲ್ಲುಗಳು:** ನೊಳಂಬರ ಶಾಸನಗಳು ಅತಿಹೆಚ್ಚು ವೀರಗಲ್ಲುಗಳೇ ಇದ್ದು ಶಾಸನಗಳನ್ನು ಒಳಗೊಂಡ ಶಾಸನೋಕ್ತ ವೀರಗಲ್ಲುಗಳೇ ಆಗಿವೆ. ದೇವಾಲಯಗಳಿಗೆ ದಾನ ನೀಡಿದ ಹಲವು ಶಾಸನಗಳನ್ನು ಸಹ ನಾವು ಗುರುತಿಸಬಹುದು. ನೊಳಂಬರು ಹಲವು ಕಾರಣಗಳಿಂದ ವಿಶೇಷವಾಗಿದ್ದಾರೆ. ಸುಮಾರು 1000 ವರ್ಷಗಳಿಗೂ ಮಿಗಿಲು ಕನ್ನಡ ನಾಡನ್ನು ಆಳಿದ ಕೀರ್ತಿ ಈ ವಂಶಕ್ಕೆ ಸಲ್ಲುತ್ತದೆ. ಸಾಮ್ರಾಟರಾಗಿ, ರಾಜರಾಗಿ, ಸಾಮಂತರಾಗಿ, ಮಾಂಡಲೀಕರಾಗಿ, ಸ್ವತಂತ್ರ ಪಾಳೇಗಾರರಾಗಿ ಕನ್ನಡ ನಾಡಿನಾದ್ಯಂತ ತಮ್ಮ ಚಹರೆಗಳನ್ನು ಉಳಿಸಿದ್ದಾರೆ. ಮೂಲ ಶೈವರಾದರೂ ಎಲ್ಲಾ ಧರ್ಮಗಳ ಸಮನ್ವಯಕಾರರಾಗಿರುವುದು ಕಾಣಬಹುದು. ಇವರ ರಾಜ ಲಾಂಛನ ನಂದಿ ಎನಿಸಿದರೂ ಇವರ ಎಲ್ಲಾ ವೀರಗಲ್ಲುಗಳಲ್ಲಿ 'ಕುಂಭ ಮತ್ತು ಕಂಭ'ವನ್ನು ಕಾಣಬಹುದಾಗಿದೆ.

ಪ್ರಸ್ತುತ ಹಾರಡಿಯ ಭಾಗದಲ್ಲಿ ದೊರೆತಿರುವ ಶಾಸನ ರಹಿತವಾದ ವಿಶೇಷ ಸ್ಮಾರಕ ಇದಾಗಿದ್ದು ತುರುಗೊಳ್ ವೀರಗಲ್ಲಿನ ಶಿಲ್ಪ ಸೌಂದರ್ಯವಂತೂ ತುಂಬಾ ವಿಶೇಷವಾಗಿದೆ. ಐದು ಅಡಿ ಎತ್ತರವಿರುವ ವೀರಗಲ್ಲು ಒಟ್ಟು ಎರಡು ಹಂತಗಳನ್ನು ಹೊಂದಿದ್ದು ಕೆಳ ಎಡಭಾಗದಲ್ಲಿ ನಾಲ್ಕು ಎತ್ತುಗಳನ್ನು ಚಿತ್ರಿಸಿದ್ದು ಎಡ ಮೇಲ್ಭಾಗದಲ್ಲಿ ಕಲಶವನ್ನು ಬಿಡಿಸಿ ಪಕ್ಕದಲ್ಲಿ ದೀಪಸ್ತಂಭವನ್ನು ಕೆತ್ತಲಾಗಿದೆ. ಇಬ್ಬರು ವೀರರನ್ನು ಚಿತ್ರಿಸಿದ್ದು ಮುಖ್ಯ ಎನಿಸುವ ವೀರ ಕತ್ತಿ, ಬಿಲ್ಲನ್ನು ಹಿಡಿದಿದ್ದು ಬಲಭಾಗದಲ್ಲಿ ಚಿತ್ರಿಸಿರುವ ವ್ಯಕ್ತಿ ವಿಶೇಷವಾದ ಕತ್ತಿಯನ್ನು ಹಿಡಿದಿದ್ದಾನೆ. ಶಿಲ್ಪದ ಮೇಲ್ಭಾಗದಲ್ಲಿ ಕೈಲಾಸಕ್ಕೆ ವೀರನನ್ನು ಕರೆದುಕೊಂಡು ಹೋಗುತ್ತಿರುವ ಅಪ್ಸರೆಯರ ಜೊತೆಗೆ

ಶಿವಲಿಂಗ ಹಾಗೂ ಎಡಭಾಗದಲ್ಲಿ ವೀರನ ಸತಿ, ಬಲಭಾಗದಲ್ಲಿ ವೀರ ಕೈಲಾಸದಲ್ಲಿ ಧ್ಯಾನಸ್ಥರಾಗಿರುವಂತೆ ಬಿಡಿಸಿ ವೀರನ ಪಕ್ಕದಲ್ಲಿಯೇ ನೊಳಂಬರ ವೀರಗಲ್ಲುಗಳಲ್ಲಿ ಕಾಣ ಸಿಗುವ ಕುಂಭ, ಸ್ತಂಭವನ್ನು ಬಿಡಿಸಲಾಗಿದೆ.

ಹಲವು ವಿಶೇಷತೆಗಳಿಂದ ಕೂಡಿರುವ ತುರುಗೋಳ್ ಶಿಲ್ಪ ಸ್ಮಾರಕಕ್ಕೆ ಖಂಡಿತವಾಗಿಯೂ ಶಾಸನ ಇರಲೇ ಬೇಕು ಆದರೆ ಇಲ್ಲಿ ಯಾವುದೇ ಶಾಸನ ಪತ್ತೆಯಾಗದಿರುವುದು ದುರದೃಷ್ಟವೇ ಸರಿ. ಏಕೆಂದರೆ ನೊಳಂಬರ ಎಲ್ಲಾ ವೀರಗಲ್ಲುಗಳು ಶಾಸನೋಕ್ತವಾಗಿದ್ದು ಕೆಲವು ಮಾತ್ರ ಶಿಲ್ಪ ಸ್ಮಾರಕ ಮತ್ತು ಶಾಸನ ಶಿಲೆ ಬೇರೆ ಬೇರೆ ಇರುವುದನ್ನು ಗಮನಿಸಬಹುದು. ಈ ಹಿನ್ನೆಲೆಯಲ್ಲಿ ಇಲ್ಲಿನ ಶಾಸನ ನಾಶವಾಗಿರುವ ಸಾಧ್ಯತೆ ಬಹಳಷ್ಟಿದೆ.

ಒಟ್ಟಿನಲ್ಲಿ ಹಾರಡಿ ಎಂಬ ಗ್ರಾಮವು ವೀರಗಲ್ಲಿನ ಕಾರಣದಿಂದಾಗಿ ಒಂಭತ್ತು ಹತ್ತು ಶತಮಾನಕ್ಕಾಗಲೇ ಇತ್ತು ಎಂಬ ಊಹೆಗೆ ಎಡೆಮಾಡಿಕೊಟ್ಟರೆ ವಿಜಯನಗರ ಕಾಲದ ಶಾಸನವು 15ನೆ ಶತಮಾನಕ್ಕಾಗಲೇ ಗ್ರಾಮ ನಿರ್ಮಾಣವಾಗಿ ವಿಜಯನಗರ ಆಡಳಿತಕ್ಕೆ ಒಳಪಟ್ಟಿತ್ತು ಎಂಬ ಅಂಶವು ಸಿದ್ಧವಾಗುತ್ತದೆ. ಹಾಗಾಗಿ ಹಾರಡಿ ಎಂಬ ಗ್ರಾಮವು ಇತಿಹಾಸದ ಕುರುಹಾಗಿ ತಾಲ್ಲೂಕಿನಲ್ಲಿ ದಾಖಲಾಗುತ್ತದೆ.

**ಶಾಸನ ಶೋಧನೆ ಸಹಕಾರ:**

ಲಾಯರ್ ರವಿಕುಮಾರ್ ಕೆ.ಎಂ. ಹೊಸಕೋಟೆ,

**ಗ್ರಾಮಸ್ಥರಾದ:**

ಮುನಿರಾಜು, ದೇವರಾಜ, ನಾಗೇಶ್, ನಾರಾಯಣಸ್ವಾಮಿ, ಚಿಕ್ಕಮುನೇಗೌಡ, ನಾರಾಯಣಸ್ವಾಮಿ, ನಾಗಪ್ಪ, ಶ್ರೀಧರ್, ಅನಿಲ್, ಕೃಷ್ಣಪ್ಪ, ವೆಂಕಟೇಶ್ ಇದ್ದರು.

## ಪರಾಮರ್ಶನ ಗ್ರಂಥಗಳು:


1. ಲೂಯಿಸ್ ರೈಸ್ ಬಿ., (1905) ಸಂಪುಟ–09, ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿರುವ ಶಾಸನಗಳು, ಮೈಸೂರು ಗೌರ್ಮೆಂಟ್ ಸೆಂಟ್ರಲ್ ಪ್ರೆಸ್.
2. ಲೂಯಿಸ್ ರೈಸ್ ಬಿ., (1905), ಸಂಪುಟ–10, ಕೋಲಾರ ಡಿಸ್ಟ್ರಿಕ್ಟಿನಲ್ಲಿರುವ ಶಾಸನಗಳು (2ನೇ ಸಂಚಿಕೆ), ಕನ್ನಡ ಮತ್ತು ಅರವನೆ ಪ್ರತಿ. ಮೈಸೂರು ಗೌರ್ಮೆಂಟ್ ಸೆಂಟ್ರಲ್ ಪ್ರೆಸ್.
3. ನೊಳಂಬ ಇತಿಹಾಸ ದರ್ಶನ, (1976), ನೊಳಂಬ ಪ್ರಿಂಟ್ಸ್, ತಿಪಟೂರು.
4. ಜಯಮ್ಮ ಕರಿಯಣ್ಣ ಎಚ್., (2008), ನೊಳಂಬ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಕರ್ನಾಟಕ ಇತಿಹಾಸ ಸಂಶೋಧನ ಮಂಡಳಿ, ಧಾರವಾಡ.




ನೊಳಂಬರ ಶಾಸನ ರಹಿತ ವೀರಗಲ್ಲು



ಕೃಷ್ಣದೇವರಾಯನ ಉಲ್ಲೇಖವಿರುವ ವಿಜಯನಗರ ಶಾಸನ.


**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.